ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಅವರು ಇದೇ 17ನೇ ತಾರೀಖು ಕರ್ನಾಟಕಕ್ಕೆ ಈ 19 ಯೋಜನೆಗಳನ್ನು ನೋಡುವುದಕ್ಕೆ ಬರುತ್ತಿದ್ದಾರೆ. ವೆಂಟೆಡ್ ಡ್ಯಾಮ್ ಕಟ್ಟುವುದಕ್ಕೆ ಒ.ಇ.ಸಿ.ಎಫ್ ನವರು ಕೊಡತಕ್ಕದ್ದು 17 ಕೋಟಿ ರೂಪಾಯಿಗಳು ಮತ್ತು ನಮ್ಮ ಸರ್ಕಾರದವರು ಕೊಡತಕ್ಕದ್ದು 4 ಕೋಟಿ 55 ಲಕ್ಷ ರೂಪಾಯಿಗಳು. ಇದು ಇವತ್ತು ನಾವು ಮಾಡಿರತಕ್ಕ ಆರ್ಥಿಕ ಮಾದರಿ. ತಾವು ಹೇಳಿದ ಹಾಗೆ ಕಳೆದ ವಷರ ಆದ ತೊಂದರೆಯನ್ನು ಈ ವರ್ಷ ಭರಿಸಬೇಕೆಂದು ನಾವು ಮೈಂಟೆನೆನ್ಸ್ ಎಲ್ಲವನ್ನೂ ಆಯಾಯ ನಗರಸಭೆಗಳಿಗೆ ಮತ್ತು ಪುರಸಭೆಗಳಿಗೆ ಒಪ್ಪಿಸಿದ್ದೇವೆ. ಈ ಸಾರಿ ಅವರೇ ನೀರಿನ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೇನಾದರೂ ವಿಶೇಷ ಪರಿಸ್ಥಿತಿ ಇದ್ದರೆ ಅದನ್ನು ಪರಿಶೀಲಿಸಿ ಸಹಾಯ ಮಾಡುವ ಕಾರ್ಯ ಮಾಡುತ್ತೇವೆ.

ಶ್ರೀ ಯು.ಆರ್. ಸಭಾಪತಿ:- ಉಡುಪಿ ಪುರಸಭೆಯ ಮೊದಲ ಹಂತದ ಯೋಜನೆ ಏನಿದೆ ಅದು 25 ವರ್ಷಗಳ ಹಿಂದೆ ಮಾಡಿದಂಥ ಯೋಜನೆ. ಆ ಯೋಜನೆ ಈಗ 25 ವರ್ಷದ ನಂತರ ತೀವ್ರ ತುರ್ತುಪರಿಸ್ಥಿತಿಯ ರೂಪದಲ್ಲಿ ಆಗಿದೆ. ಕಳೆದ ಭಾರಿ ನಾವು ಮಣಿಪಾಲ್ ಆಸ್ಪತ್ರೆ ಮತ್ತು ಅಲ್ಲಿನ ಹಾಸ್ಟೆಲ್‌ಗಳ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡಿಸಿದ್ದೇವೆ. ಹೀಗಿರುವಾಗ ಮುನಿಸಿಪಾಲಿಟಿಯಿಂದ ಎಲ್ಲವನ್ನೂ ಮಾಡಬೇಕೆಂದರೆ ಮುನಿಸಿಪಾಲಿಟಿಯಲ್ಲಿ ಯಾವುದೇ ಹಣ ಇರುವುದಿಲ್ಲ.

ಅಧ್ಯಕ್ಷರು:- ಅವರು ಎಕ್ಸಾಮಿನ್ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಒಂದು ವೇಳೆ ನೀರಿನ ತೊಂದರೆ ಆದಾಗ ಅದಕ್ಕೆ ಕಂದಾಯ ಇಲಾಖೆಯ ಮೂಲಕ ಹಣ ಕೊಡಿಸುವ ವ್ಯವಸ್ಥೆ ಮಾಡುತ್ತೇವೆ.

ವಿಷಯ:- ರಾಜ್ಯದಲ್ಲಿರುವ ಜವಳಿ ಗಿರಿಣಿಗಳ ಸಂಖ್ಯೆ ಹಾಗೂ ಹತ್ತಿ ಮಂಡಳಿ ರಚನೆ.

20(106)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿರುವ ಜವಳಿ ಗಿರಣಿಗಳೆಷ್ಟು; ಈ ಗಿರಣಿಗಳು ಯಾವ ಯಾವ ಜಿಲ್ಲೆಗಳಲ್ಲಿವೆ;

ಆ) ರಾಜ್ಯದಲ್ಲಿ ಹತ್ತಿ ಉತ್ಪಾದನೆಯ ಪ್ರಮಾಣವೆಷ್ಟು? ಜಿಲ್ಲಾವಾರು ವಿವರ ನೀಡುವುದು;

ಇ) ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಹತ್ತಿ ಪ್ರಮಾಣಕ್ಕೆ ಈಗಿರುವ ಜವಳಿ ಗಿರಿಣಿಗಳು ಸಾಕಾಗುತ್ತಿವೆಯೇ;

ಈ) ರಾಜ್ಯದ ರೈತರ ಹಿತದೃಷ್ಟಿಯಿಂದ ಪ್ರತ್ಯೇಕ ಹತ್ತಿ ಮಂಡಳಿಯನ್ನು ರಚಿಸುವ ಉದ್ದೇಶ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಶ್ರೀ ಎಂ.ಎಸ್. ಪಾಟೀಲ್ (ಜವಳಿ ಸಚಿವರು):-

ಅ) ರಾಜ್ಯದಲ್ಲಿ ಒಟ್ಟು 64 ಜವಳಿ ಗಿರಣಿಗಳು ಇರುತ್ತದೆ. ಜವಳಿ ಗಿರಣಿಗಳ ಜಿಲ್ಲಾವಾರು ಪಟ್ಟಿಯನ್ನು ಅನುಬಂದ-1ರಲ್ಲಿ ಲಗತ್ತಿಸಲಾಗಿದೆ.

ಆ) ರಾಜ್ಯದಲ್ಲಿ ಸುಮಾರು 9 ಲಕ್ಷ ಬೇಲುಗಳಷ್ಟು ಹತ್ತಿ ಉತ್ಪಾದನೆಯಿದ್ದು, ಪ್ರಸ್ತುತ 1996-97ನೆ ಸಾಲಿನಲ್ಲಿ ಜನವರಿ 1997ರವರೆಗೂ ಉತ್ಪಾದನೆಯಾಗಿರುವ ಹತ್ತಿಯ ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿವೆ:

	ಜಿಲ್ಲೆಯ ಹೆಸರು	ಉತ್ಪಾದನೆ ಬೇಲ್‌ಗಳಲ್ಲಿ ಒಂದು ಬೇಲ್ ಎಂದರೆ 170 ಕೆ.ಜಿ. (ಬೇಲ್‌ಗಳಲ್ಲಿ)
1.	ಕೋಲಾರ	35
2.	ತುಮಕೂರು	1883
3.	ಶಿವಮೊಗ್ಗ	25729
4.	ಚಿತ್ರದುರ್ಗ	25729
5.	ಮೈಸೂರು	61206
6.	ಹಾಸನ	5695
7.	ಚಿಕ್ಕಮಗಳೂರು	203955
8.	ಧಾರವಾಡ	5734
9.	ಉತ್ತರ ಕನ್ನಡ	70010
10.	ಬೆಳಗಾಂ	21887
11.	ಬಿಜಾಪುರ	97238
12.	ಬಳ್ಳಾರಿ	91126
13.	ಗುಲ್ಬರ್ಗ	4588
14.	ಬೀದರ್	2610

ಇ) ಸಾಕಾಗುತ್ತಿಲ್ಲ.

ಈ) ಹತ್ತಿ ಮಂಡಳಿಯನ್ನು ಸ್ಥಾಪಿಸುವ ಸಾಧ್ಯಾಸಾಧ್ಯತೆಗಳ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಕರ್ನಾಟಕ ರಾಜ್ಯದಲ್ಲಿರುವ ಜವಳಿ ಗಿರಣಿಗಳು, ಖಾಸಗಿ ಸಹಕಾರಿ, ಎನ್.ಟಿ.ಸಿ. ಮತ್ತು ಸರ್ಕಾರಿ ವಲಯದಲ್ಲಿ ಬರುವ ಜಿಲ್ಲಾವಾರು ವಿವರಗಳ ಪಟ್ಟಿ.

ಬೆಂಗಳೂರು ಜಿಲ್ಲೆ: ಖಾಸಗಿ ವಲಯ:

1. ಬಿನ್ನಿ ಲಿ., ಬೆಂಗಳೂರು, ಹತ್ತಿ, ಉಣ್ಣೆ ಮತ್ತು ರೇಷ್ಮೆ ಗಿರಣಿ (ನಿ), ಅಗ್ರಹಾರ, ಬೆಂಗಳೂರು.
2. ರಾಮ್‌ಕುಮಾರ್ ಗಿರಣಿ (ನಿ), ರಾಜಾಜಿನಗರ, ಬೆಂಗಳೂರು
3. ಗೋಪಾಲಕೃಷ್ಣ ಜವಳಿ ಗಿರಣಿ ಪ್ರೈ.ಲಿ., ದಾಸರಹಳ್ಳಿ, ಬೆಂಗಳೂರು
4. ಸುಭದ್ರ ಟೆಕ್ಸ್‌ಟೈಲ್ಸ್, ಪ್ರೈ.ಲಿ, ದಾಸರಹಳ್ಳಿ, ಬೆಂಗಳೂರು
5. ಶ್ರೀ ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಲಿ, ಹೆಜ್ಜಾಲ ಅಂಚೆ, ರಾಮನಗರ ತಾ, ಬೆಂಗಳೂರು
6. ಕೆ.ಆರ್.ಮಿಲ್ಸ್ ಚಾಮರಾಜಪೇಟೆ, ಬೆಂಗಳೂರು
7. ದೊಡ್ಡಬಳ್ಳಾಪುರ ನೂಲಿನ ಗಿರಣಿ ದೊಡ್ಡಬಳ್ಳಾಪುರ, ಬೆಂಗಳುರು
8. ಸೋನಾ ಸಿಂಥಟಿಕ್ಸ್, ಕನಕಪುರ, ಬೆಂಗಳೂರು
9. ಚಂದ್ರ ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ಸ್ ಲಿ, ಚಾಮರಾಜಪೇಟೆ ಬೆಂಗಳೂರು
10. ಸಾಯಿ ಲಕ್ಷ್ಮಿ ಟೆಕ್ಸ್‌ಟೈಲ್, ಪ್ರೈ.ಲಿ., ಕನ್ನಮಂಗಲ ರೋಡ್, ವೈಟ್‌ಫೀಲ್ಡ್, ಬೆಂಗಳೂರು.

ಎಸ್.ಟಿ.ಸಿ.ಯ ವಲಯ: (ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾಪೋರೇಷನ್)

1. ಮಿನರ್ವ ಮಿಲ್ಸ್, ಮಾಗಡಿ ರಸ್ತೆ, ಬೆಂಗಳೂರು ಗಿರಣಿಯು ಅಗ್ನಿ ಅಪಘಾತಕ್ಕೊಳಪಟ್ಟಿದೆ.
2. ಮೈಸೂರು ನೂಲಿನ ಮತ್ತು ಮ್ಯಾನುಫ್ಯಾಕ್ಚರಿಂಗ್ ಮಿಲ್ಸ್, ಮಲ್ಲೇಶ್ವರಂ, ಬೆಂಗಳೂರು

ಬೆಳಗಾಂ ಜಿಲ್ಲೆ: ಖಾಸಗಿ ವಲಯ:

1. ಗೋಕಾಕ ಗಿರಣಿ (ನಿ), ಗೋಕಾಕ್ ಫಾಲ್ಸ್, ಬೆಳಗಾಂ ಜಿಲ್ಲೆ
2. ಗೋಗಟೆ ಜವಳಿ ಗಿರಣಿ (ನಿ), ಬೆಳಗಾಂ ಜಿಲ್ಲೆ

ಸಹಕಾರಿ ವಲಯ:

1. ಬೆಳಗಾಂ ಸಹಕಾರಿ ನೂಲಿನ ಗಿರಣಿ (ನಿ), ಪಂತಬಾಳೇಕುಂದ್ರಿ, ಬೆಳಗಾಂ ಜಿಲ್ಲೆ
2. ಮಲಪ್ರಭಾ ಸಹಕಾರಿ ನೂಲಿನ ಗಿರಣಿ (ನಿ), ಸೌಂದತ್ತಿ, ಬೆಳಗಾಂ ಜಿಲ್ಲೆ
3. ಶ್ರೀ ಸಿದ್ದೇಶ್ವರ ಸಹಕಾರಿ ನೂಲಿನ ಗಿರಣಿ (ನಿ), ಚಿಕ್ಕೋಡಿ, ಬೆಳಗಾಂ ಜಿಲ್ಲೆ (ಸ್ಥಾಪನೆಯಾಗಬೇಕಾಗಿರುವುದು).

4. ಮಹಾವೀರ ಸಹಕಾರಿ ನೂಲಿನ ಗಿರಣಿ (ನಿ), ಚಿಕ್ಕೋಡಿ, ಬೆಳಗಾಂ (ಸ್ಥಾಪನೆಯಾಗಬೇಕಾಗಿರುವುದು)
5. ರಾಯಬಾಗ್ ಸಹಕಾರಿ ನೂಲಿನ ಗಿರಣಿ (ನಿ), ರಾಯಬಾಗ್, ಬೆಳಗಾಂ (ಸ್ಥಾಪನೆಯಾಗಬೇಕಾಗಿರುವುದು)
6. ದಿ ಕರ್ನಾಟಕ ಉಣ್ಣೆ ಸಹಕಾರಿ ನೂಲಿನ ಗಿರಣಿ (ನಿ), ಬೆನಕಟ್ಟಿ, ಸೌಂದತ್ತಿ ತಾ, ಬೆಳಗಾಂ (ಸ್ಥಾಪನೆಯಾಗಬೇಕಾಗಿರುವುದು)

ಬಿಜಾಪುರ ಜಿಲ್ಲೆ ಸಹಕಾರಿ ವಲಯ

1. ಬಿಜಾಪುರ ಸಹಕಾರಿ ನೂಲಿನ ಗಿರಣಿ (ನಿ) ಬಿಜಾಪುರ ಜಿಲ್ಲೆ
2. ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ (ನಿ), ಬಾಗಲಕೋಟೆ, ಬಿಜಾಪುರ ಜಿಲ್ಲೆ
3. ಶ್ರೀ ಬಾಲಾಜಿ ಎಸ್‌ಸಿ:ಎಸ್‌ಟಿ:ಸಹಕಾರಿ ನೂಲಿನ ಗಿರಣಿ, ಆಲಮಟ್ಟಿ ಸಿಂಧಗಿ ತಾ: ಬಿಜಾಪುರ ಜಿಲ್ಲೆ (ಸ್ಥಾಪನೆಯಾಗಬೇಕಾಗಿರುವುದು).
4. ಬನಹಟ್ಟಿ ಸಹಕಾರಿ ನೂಲಿನ ಗಿರಣಿ (ನಿ), ಬನಹಟ್ಟಿ, ಬಿಜಾಪುರ ಜಿಲ್ಲೆ

ಬಳ್ಳಾರಿ ಜಿಲ್ಲೆ: ಖಾಸಗಿ ವಲಯ:

1. ಶ್ರೀ ಕೊಟ್ರೇಶ್ವರ ಗಿರಣಿ, ಕೊಟ್ಟೂರ್, ಬಳ್ಳಾರಿ ಜಿಲ್ಲೆ
2. ಬಳ್ಳಾರಿ ಸ್ಪಿನ್ನಿಂಗ್ ಆಂಡ್ ವೀವಿಂಗ್ ಮಿಲ್ಸ್ (ಪ್ರೈ)ಲಿ, ಬಳ್ಳಾರಿ
3. ಮುಲ್ಲಂಗಿ ಸ್ಪಿಂಟೆಕ್ಸ್ ಪ್ರೈ ಲಿ, 87:ಎ, ಆಂದ್ರಾಳ್ ರಸ್ತೆ, ಬಳ್ಳಾರಿ

ಬೀದರ್ ಜಿಲ್ಲೆ: ಖಾಸಗಿ ವಲಯ:

1. ಮೆ:ಎಸಿ ಎಂ ಇ: ಸ್ಪಿನ್ನರ್ಸ್ ಲಿ, ಹುಮ್ನಾಬಾದ್ ಕೈಗಾರಿಕಾ ವಸಾಹತು, ಹುಮ್ನಾಬಾದ್, ಬೀದರ್ ಜಿಲ್ಲೆ.

ಚಿತ್ರದುರ್ಗ ಜಿಲ್ಲೆ: ಖಾಸಗಿ ವಲಯ

1. ಶ್ರೀ ಜಯಲಕ್ಷ್ಮಿ ಟೆಕ್ಸ್‌ಟೈಲ್ಸ್ ಗರೇಹಟ್ಟಿ, ಚಿತ್ರದುರ್ಗ ಜಿಲ್ಲೆ
2. ಚಿತ್ರದುರ್ಗ ಸ್ಪಿಂಟೆಕ್ಸ್ ಲಿ, ಚಳ್ಳಕೆರೆ, ಚಿತ್ರದುರ್ಗ
3. ದಾವಣಗೆರೆ ಹತ್ತಿ ಗಿರಣಿ ಪ್ರೈ.ಲಿ. ಚಿತ್ರದುರ್ಗ ಜಿಲ್ಲೆ
4. ಶ್ರೀ ಸಿದ್ದೇಶ್ವರ ಜವಳಿ ಗಿರಣಿ, ದಾವಣಗೆರೆ, ಚಿತ್ರದುರ್ಗ
5. ಶ್ರೀ ಆಂಜನೇಯ ಜವಳಿ (ನಿ), ದಾವಣಗೆರೆ, ಚಿತ್ರದುರ್ಗ
6. ಶ್ರೀ ಗಣೇಶ್ ಜವಳಿ ಗಿರಣಿ (ನಿ), ದಾವಣಗೆರೆ, ಚಿತ್ರದುರ್ಗ
7. ಶ್ರೀ ಚಂದ್ರೋದಯ ಗಿರಣಿ (ನಿ) ದಾವಣಗೆರೆ, ಚಿತ್ರದುರ್ಗ

ಎನ್. ಟಿ. ಸಿ.

1. ಶ್ರೀ ಯಲ್ಲಮ್ಮ ಹತ್ತಿ ಉಣ್ಣೆ ಮತ್ತು ರೇಷ್ಮೆ ಗಿರಣಿ, ಯಲ್ಲಮ್ಮ ಟೌನ್, ಚಿತ್ರದುರ್ಗ

ಧಾರವಾಡ ಜಿಲ್ಲೆ ಖಾಸಗಿ ವಲಯ:

1. ನಂದಿಹಸ್ಬಿ ಟೆಕ್ಸ್‌ಟೈಲ್ಸ್ ಲಿ, ನರಗುಂದ, ಧಾರವಾಡ ಜಿಲ್ಲೆ
2. ಬೊರೂಕಾ ಟೆಕ್ಸ್‌ಟೈಲ್ಸ್, ರಾಯಾಪುರ, ಧಾರವಾಡ ಜಿಲ್ಲೆ
3. ಕೃಷ್ಣಾ ಸ್ಪಿನ್ನರ್ಸ್ ಲಿ, ಹುಬ್ಬಳ್ಳಿ, ಧಾರವಾಡ ಜಿಲ್ಲೆ
4. ದಾವಣಗೆರೆ ಹತ್ತಿ ಗಿರಣಿ, ಗದಗ್ ಧಾರವಾಡ ಜಿಲ್ಲೆ

ರಾಜ್ಯ ಸರ್ಕಾರ:

1. ಮಹದೇವ ಜವಳಿ ಗಿರಣಿ (ನಿ), ಹುಬ್ಬಳ್ಳಿ, ಧಾರವಾಡ ಜಿಲ್ಲೆ

ಸಹಕಾರಿ ವಲಯ:

1. ಸಂಜಯ ಸಹಕಾರಿ ಜವಳಿ ನೂಲಿನ ಗಿರಣಿ (ನಿ) ನ್ಯೂ ಕಾಟನ್ ಮಾರ್ಕೆಟ್ ಯಾರ್ಡ್, ಹುಬ್ಬಳ್ಳಿ ಧಾರವಾಡ ಜಿಲ್ಲೆ (ಸ್ಥಾಪನೆಯಾಗಬೇಕಾಗಿರುವುದು)
2. ಮುಳಗುಂದ ಸಹಕಾರಿ ನೂಲಿನ ಗಿರಣಿ (ನಿ), ಮುಳಗುಂದ, ಗದಗ ತಾ: ಧಾರವಾಡ ಜಿಲ್ಲೆ (ಸ್ಥಾಪನೆಯಾಗಬೇಕಾಗಿರುವುದು)
3. ಶ್ರೀ ಮಹಾಲಕ್ಷ್ಮಿ ಸಹಕಾರಿ ನೂಲಿನ ಗಿರಣಿ (ನಿ) ನವಲಗುಂದ, ಧಾರವಾಡ ಜಿಲ್ಲೆ (ಸ್ಥಾಪನೆಯಾಗಬೇಕಾಗಿರುವುದು)
4. ಸಿದ್ಧಾರ್ಥ ಸಹಕಾರಿ ನೂಲಿನ ಗಿರಣಿ (ನಿ) ಹುಬ್ಬಳ್ಳಿ, ಧಾರವಾಡ ಜಿಲ್ಲೆ (ಸ್ಥಾಪನೆಯಾಗಬೇಕಾಗಿರುವುದು)
5. ಗದಗ್ ಸಹಕಾರಿ ನೂಲಿನ ಗಿರಣಿ (ನಿ) ಹುಲಕೋಟಿ ಧಾರವಾಡ ಜಿಲ್ಲೆ
6. ರೈತರ ಸಹಕಾರಿ ನೂಲಿನ ಗಿರಣಿ (ನಿ), ಹುಲಕೋಟಿ ಧಾರವಾಡ ಜಿಲ್ಲೆ
7. ಶ್ರೀ ಸೋಮೇಶ್ವರ ಸಹಕಾರಿ ನೂಲಿನ ಗಿರಣಿ (ನಿ), ಲಕ್ಷ್ಮೇಶ್ವರ, ಧಾರವಾಡ ಜಿಲ್ಲೆ
8. ತುಂಗಭದ್ರ ಸಹಕಾರಿ ನೂಲಿನ ಗಿರಣಿ (ನಿ), ರಾಣೆಬೆನ್ನೂರು, ಧಾರವಾಡ ಜಿಲ್ಲೆ.
9. ವೆಂಕಟೇಶ್ವರ ಸಹಕಾರಿ ನೂಲಿನ ಗಿರಣಿ (ನಿ), ಅಣ್ಣಿಗೇರಿ, ಧಾರವಾಡ ಜಿಲ್ಲೆ
10. ರೈತರ ಸಹಕಾರಿ ನೂಲಿನ ಗಿರಣಿ (ನಿ) ಹನುಮನಮಟ್ಟಿ, ರಾಣೆಬೆನ್ನೂರು, ಧಾರವಾಡ ಜಿಲ್ಲೆ

ಗುಲ್ಬರ್ಗಾ ಜಿಲ್ಲೆ: ಎನ್.ಟಿ.ಸಿ.

1. ಮೆಹಬೂಬ್ ಶಾಹಿ ಗುಲ್ಬರ್ಗಾ ಮಿಲ್, ಗುಲ್ಬರ್ಗಾ ಜಿಲ್ಲೆ

ಮೈಸೂರು ಜಿಲ್ಲೆ:ಖಾಸಗಿ ವಲಯ:

1. ಶ್ರೀ ಕೃಷ್ಣ ರಾಜೇಂದ್ರ ಗಿರಣಿ (ನಿ) ಮೈಸೂರು
2. ಶ್ರೀ ಕುಮಾರವೇಲು ಗಿರಣಿ (ನಿ) ಪಿರಿಯಾಪಟ್ಟಣ, ಮೈಸೂರು
3. ಶ್ರೀ ಮೀನಾಕ್ಷಿ ಸುಂದರಂ ಗಿರಣಿ (ನಿ), ಹುಣಸೂರು, ಮೈಸೂರು ಜಿಲ್ಲೆ
4. ಸುಜಾತ ಜವಳಿ ಗಿರಣಿ, ನಂಜನಗೂಡು, ಮೈಸೂರು ಜಿಲ್ಲೆ
5. ವೇಲನ್ ಟೆಕ್ಸ್‌ಟೈಲ್ಸ್ (ಪ್ರೈ) ಲಿ, ಚಾಮರಾಜಪೇಟೆ, ಮೈಸೂರು ಜಿಲ್ಲೆ
6. ವಿಷ್ಣು ಟೆಕ್ಸ್‌ಟೈಲ್ಸ್ ಪಿರಿಯಾಪಟ್ಟಣ, ಮೈಸೂರು ಜಿಲ್ಲೆ
7. ಮಾರಿ ಸ್ಪಿನ್ನರ್ಸ್ (ಪ್ರೈ) ಲಿ, ಮೈಸೂರು
8. ಶ್ರೀದೇವಿ ಟೆಕ್ಸ್‌ಟೈಲ್ಸ್ (ಪ್ರೈ) ಲಿ, ಮೈಸೂರು, ಮೈಸೂರು ಜಿಲ್ಲೆ
9. ವಾಸಾರಿ ಸ್ಪಿನ್ನಿಂಗ್ ಮಿಲ್ಸ್ ನಂಜನಗೂಡು, ಮೈಸೂರು ಜಿಲ್ಲೆ

ಶಿವಮೊಗ್ಗ ಜಿಲ್ಲೆ: ಸಹಕಾರಿ

1. ಸಹ್ಯಾದ್ರಿ ನೂಲಿನ ಗಿರಣಿ (ನಿ), ಚನ್ನಗಿರಿ ಶಿವಮೊಗ್ಗ ಜಿಲ್ಲೆ (ಸ್ಥಾಪನೆಯಾಗಬೇಕಾಗಿರುವುದು)

ರಾಯಚೂರು ಜಿಲ್ಲೆ: ಖಾಸಗಿ ವಲಯ:

1. ವಿಶಾಲ್ ಕಾಟನ್ ಸ್ಪಿನ್ನರ್ಸ್, ದೇವಸುಗೂರ್ ಕೈಗಾರಿಕಾ ವಸತು ಶಕ್ತಿನಗರ, ರಾಯಚೂರು

ಸಹಕಾರಿ ವಲಯ:

1. ರಾಯಚೂರು ಸಹಕಾರಿ ಗಿರಣಿ, ರಾಯಚೂರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ರಾಜ್ಯದ ರೈತರ ಹಿತದೃಷ್ಟಿಯಿಂದ ಪ್ರತ್ಯೇಕ ಹತ್ತಿ ಮಂಡಳಿಯನ್ನು ರಚಿಸುವ ಉದ್ದೇಶ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ಎಂಬುದಕ್ಕೆ ಹತ್ತಿ ಮಂಡಳಿಯನ್ನು ಸ್ಥಾಪಿಸುವ ಸಾಧ್ಯಾಸಾಧ್ಯತೆಗಳ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ ಎಂದು ಹೇಳಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಈ ಹಿಂದೆ ಒಂದು ಭರವಸೆಯನ್ನು ನೀಡಿ ಧಾರವಾಡದ ಹತ್ತಿರ ಹತ್ತಿ ಮಂಡಳಿಯನ್ನು ರಚಿಸುವದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಿರಿ. ಇವತ್ತಿನ ದಿವಸ ಹತ್ತಿ ಬೆಳೆಯ ಪರಿಸ್ಥಿತಿ ಏನಾಗಿದೆ ಎಂದು ಮಾನ್ಯ ಸಚಿವರಿಗೆ ಗೊತ್ತಿದೆ. ಒಂದು ಕ್ವಿಂಟಾಲ್ ಹತ್ತಿ ಬೆಳೆದರೆ ಸುಮಾರು ಐನೂರರಿಂದ ಒಂದು ಸಾವಿರ ರೂಪಾಯಿಗಳಷ್ಟು ನಷ್ಟವಾಗುವ ಪರಿಸ್ಥಿತಿ ಇದೆ. ಎಲ್ಲಾ

ವಸ್ತುಗಳ ಬೆಲೆಗಳು ಜಾಸ್ತಿಯಾಗಿ ರೈತರು ತೀರಾ ಕಷ್ಟಕ್ಕೆ ಒಳಗಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರತಕ್ಕ ಸಂದರ್ಭದಲ್ಲಿ ಸರ್ಕಾರದ ಮೇಲೆ ತೀವ್ರ ರೀತಿಯ ಒತ್ತಾಯವನ್ನು ಅವರು ತಂದಿದ್ದಾರೆ. ಸರ್ಕಾರದವರು ಒಂದು ಕಡೆ ಸಾಧ್ಯಾ ಸಾಧ್ಯತೆಯನ್ನು ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಇನ್ನೊಂದು ಕಡೆ ಮಂಡಳಿ ರಚನೆ ಮಾಡುತ್ತೇವೆಂದು ಹೇಳಿದ್ದಾರೆ. ಮಂಡಳಿ ರಚನೆ ಮಾಡತಕ್ಕ ಉದ್ದೇಶ ಸರ್ಕಾರಕ್ಕೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟಪಡಿಸಬೇಕು. ಎರಡನೆಯದಾಗಿ, ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಹತ್ತಿಯ ಪ್ರಮಾಣಕ್ಕೆ ಈಗಿರುವ ಜವಳಿ ಗಿರಣಿಗಳು ಸಾಕಾಗುತ್ತಿವೆಯೇ ಎಂದರೆ ಇಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಅಂದರೆ ಹತ್ತಿ ಬೆಳೆ ಹೆಚ್ಚಾಗಿ ಗಿರಣಿಗಳು ಕಡಿಮೆಯಾಗಿವೆ ಗಿರಣಿಗಳು ಕಡಿಮೆ ಇದ್ದಾಗ ಹತ್ತಿ ಬೆಳೆ ನಷ್ಟವಾಗತಕ್ಕ ಪ್ರಶ್ನೆ ಬರಬಾರದು. ಗಿರಣಿಗಳು ಹೆಚ್ಚಾದಾಗ ಹತ್ತಿ ಕೊಂಡುಕೊಳ್ಳುವವರ ಸಂಖ್ಯೆಯೂ ಹೆಚ್ಚಾಗುತ್ತದೆ. ಆದರೆ ಹತ್ತಿ ಬೆಳೆ ಜಾಸ್ತಿ ಇದ್ದು ಗಿರಣಿಗಳು ಕಡಿಮೆ ಇವೆ, ಗಿರಣಿಗಳು ಸಾಕಾಗುತ್ತಿಲ್ಲ ಎಂದು ಹೇಳುವಾಗ ನೀವು ಬೇರೆ ಕಡೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ? ವ್ಯವಸ್ಥೆ ಮಾಡದಿದ್ದರೆ ರೈತರಿಗೆ ಆಗತಕ್ಕ ತೊಂದರೆಗಳು ಏನು? ಏಕೆಂದರೆ ಹತ್ತಿ ಗಿರಣಿಗಳು ಕಡಿಮೆ ಇವೆ, ಹತ್ತಿ ಬೆಳೆ ಜಾಸ್ತಿಯಾಗುತ್ತಿದೆ ಹಾಗೂ ಕೊಂಡುಕೊಳ್ಳುವವರು ಇರುವುದಿಲ್ಲ ಅಂದಾಗ ಅದಕ್ಕೆ ಬೇರೆ ವ್ಯವಸ್ಥೆ ಮಾಡಿದ್ದೀರೋ ವ್ಯವಸ್ಥೆ ಮಾಡದೆ ಇದ್ದ ಸಂದರ್ಭದಲ್ಲಿ, ಕಾಫಿ ಬೆಳೆಗಾರರಿಗೆ ಹೇಗೆ ಕಾಫಿ ಮಂಡಳಿಯನ್ನು ರಚನೆ ಮಾಡಿ ಅವರ ರಕ್ಷಣೆಗೆ ಬರುತ್ತಿದ್ದೀರಿ ಅದೇ ರೀತಿ ಹತ್ತಿ ಮಂಡಳಿಯನ್ನು ರಚನೆ ಮಾಡಿ ಹತ್ತಿ ಬೆಳೆಗಾರರ ರಕ್ಷಣೆಗೆ ಬರತಕ್ಕದ್ದು ಸರ್ಕಾರದ ಆದ್ಯ ಜವಾಬ್ದಾರಿ. ಇದರ ಬಗ್ಗೆ ಸ್ಪಷ್ಟವಾದ ತೀರ್ಮಾನವನ್ನು ಸರ್ಕಾರ ಹೇಳಬೇಕಾಗುತ್ತದೆ.

ಶ್ರೀ ಎಂ.ಎಸ್. ಪಾಟೀಲ್:- ಇದಕ್ಕೆ ಈಗಾಗಲೇ ವಿವರವಾದ ಉತ್ತರ ಕೊಟ್ಟಿದ್ದೇನೆ. ಹತ್ತಿ ಮಂಡಳಿ ಸ್ಥಾಪನೆ ಮಾಡುವುದಕ್ಕೆ ಸರ್ಕಾರ ತೀರ್ಮಾನ ಮಾಡಿದೆಯೇ ಎಂದು ಅವರು ಪ್ರಮುಖವಾಗಿ ಕೇಳುತ್ತಿದ್ದಾರೆ. ಹತ್ತಿ ಮಂಡಳಿ ಸ್ಥಾಪನೆಯಾಗಬೇಕು ಎಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆ. ಇನ್ನೂ ಆ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಂಡಿಲ್ಲ. ಅದರ ಅವಶ್ಯಕತೆ ಇದೆ ಎಂಬುದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತೇವೆಂದು ಹೇಳುತ್ತೇನೆ. ರಾಜ್ಯದಲ್ಲಿ ಬೆಳೆದಂಥ ಹತ್ತಿಯ ಪ್ರಮಾಣಕ್ಕೆ ನೂಲಿನ ಗಿರಣಿಗಳು ಸಾಕಾಗುತ್ತಿಲ್ಲ ಎಂಬುದನ್ನು ಉತ್ತರದಲ್ಲಿ ತಿಳಿಸಿದ್ದೇನೆ. ನಮ್ಮಲ್ಲಿ ಉತ್ಪತ್ತಿಯಾಗತಕ್ಕ ಹತ್ತಿ, ನಾವು ಉಪಯೋಗ ಮಾಡತಕ್ಕ ಹತ್ತಿ ಪ್ರಮಾಣಕ್ಕೂ ಹೋಲಿಕೆ ಮಾಡಿ ನೋಡಿದರೆ ಶೇಕಡ 30 ರಷ್ಟು ಮಾತ್ರ ಉಪಯೋಗ ಮಾಡುತ್ತಿದ್ದೇವೆ. ಹತ್ತಿಯ ಅವಶ್ಯಕತೆ ಇನ್ನೂ ಇದೆ ಅದರ ಅವಶ್ಯಕತೆಗೆ ಅನುಗುಣವಾಗಿ ಕಾರ್ಯಕ್ರಮ ತೆಗೆದುಕೊಳ್ಳತಕ್ಕದ್ದು; ಸರ್ಕಾರದ ಜವಾಬ್ದಾರಿ ಇದೆ. ಆ ದೃಷ್ಟಿಯಿಂದ ಹತ್ತಿ ಮಂಡಳಿ ಅಸ್ತಿತ್ವಕ್ಕೆ ಬರಬೇಕಾಗಿದೆ. ಅದನ್ನು ತೀವ್ರಗತಿಯಲ್ಲಿ ಪರಿಶೀಲನೆ ಮಾಡಿ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಹತ್ತಿ ಮಂಡಳಿ ರಚನೆಯ ಕಾರ್ಯ ಸರ್ಕಾರದ ಪರಿಶೀಲನೆಯ ಹಂತದಲ್ಲಿದೆ; ಎಂಬ ಆಶ್ವಾಸನೆ ಕೊಟ್ಟಿದ್ದೀರಿ. ಆದರೆ ಎಷ್ಟು ಸಮಯದೊಳಗೆ ಹತ್ತಿ ಮಂಡಳಿಯನ್ನು ಸ್ಥಾಪಿಸುತ್ತೀರಿ?

ಅಧ್ಯಕ್ಷರು:- ಮಾನ್ಯ ಮಂತ್ರಿಗಳ ಉತ್ತರ ಬಹಳ ಸ್ಪಷ್ಟವಾಗಿತ್ತು. ಮಂತ್ರಿಗಳು ಈ ತರಹ ಉತ್ತರ ಹೇಳಿದಾಗ ನನಗೂ ಸಂತೋಷವಾಗುತ್ತದೆ. ನಮ್ಮ ಕೆಲಸ ಸುಲಭವಾಗುತ್ತದೆ. ಇದರ ಅಗತ್ಯ ಇದೆ ಎಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆ ಎಂದರೆ ನಿಮ್ಮ ಅಭಿಪ್ರಾಯಕ್ಕೆ ಅವರು ಒಪ್ಪಿದ್ದಾರೆ. ಹತ್ತಿ ಮಂಡಳಿ ರಚನೆ ಮಾಡಬೇಕೆಂದರೆ ಅದಕ್ಕೆ ಬರತಕ್ಕ ಖರ್ಚುವೆಚ್ಚ ಮತ್ತೊಂದು ಅದನ್ನೆಲ್ಲ ಸ್ವಲ್ಪ ಕುಳಿತು ಆಲೋಚನೆ ಮಾಡಿ ಮಾಡಬೇಕಾಗುತ್ತದೆ, ಆಂದಾಗ ನಿಖರವಾಗಿ ಹೇಳಿ, ಒಂದು ತಿಂಗಳಲ್ಲಿ ಮಾಡುತ್ತೀರಾ ಆರು ತಿಂಗಳಲ್ಲಿ ಮಾಡುತ್ತೀರಾ ಅಂದರೆ ಆಗುವುದಿಲ್ಲ. ನೀವು ಪ್ರಸ್ತಾಪ ಮಾಡಿದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರ ಅದನ್ನು ತತ್ವಶಃ ಒಪ್ಪಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾವು ಹತ್ತಿ ಮಂಡಳಿ ರಚನೆ ಮಾಡುತ್ತೇವೆ ಎಂದು ಅವರು ಹೇಳಲಿ. ನಾನೇನು ಸಮಯ ನಿಗದಿ ಮಾಡಿ ಎಂದು ಕೇಳುತ್ತಿಲ್ಲ. 15 ದಿನಗಳಲ್ಲಿ ಮಾಡಿ ಎಂದು ನಾನು ಹೇಳುತ್ತಿಲ್ಲ. ಹತ್ತಿ ಮಂಡಳಿ ರಚನೆ ಮಾಡುತ್ತೇವೆ ಎಂದು ಸರ್ಕಾರ ಸದನಕ್ಕೆ ಸ್ಪಷ್ಟವಾದ ಭರವಸೆ ಕೊಡಲಿ.

ಶ್ರೀ ಎಂ.ಎಸ್. ಪಾಟೀಲ್:- ಹತ್ತಿ ಮಂಡಳಿಯ ಅವಶ್ಯಕತೆ ಇದೆ ಎಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆ. ನಾವು ಈ ದಿಸೆಯಲ್ಲಿ ಒಂದು ಕಾರ್ಯಕ್ರಮ ರೂಪಿಸಿಕೊಂಡು ತೀವ್ರಗತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಂಡಳಿ ರಚನೆ ಮಾಡುತ್ತೇವೆ ಎಂದು ಆಶ್ವಾಸನೆ ಕೊಡಬೇಕಲ್ಲ. ಸಮಸ್ಯೆ ಮನವರಿಕೆಯಾಗಿದೆ ಎಂದು ಸುಮ್ಮನೆ ಕುಳಿತರೆ ಆಗುವುದಿಲ್ಲ. ಸರ್ಕಾರದವರು ಮಂಡಳಿ ರಚನೆ ಮಾಡುತ್ತೇವೆಂದು ಆಶ್ವಾಸನೆ ಕೊಡಿ.

ಅಧ್ಯಕ್ಷರು:- ಸುಮ್ಮಸುಮ್ಮನೆ ಆಶ್ವಾಸನೆ ಕೊಡಿ ಎಂದು ಜೇಬಿಗೆ ಏತಕ್ಕಿಟ್ಟುಕೊಳ್ಳುತ್ತೀರಿ? ಕೆಲಸ ಮಾಡಿಸಿಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಸಮಸ್ಯೆ ಮನವರಿಕೆಯಾಗಿದೆ ಎಂದು ಹೇಳಿದ್ದಾರೆ ಸಂತೋಷ. ಆದರೆ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ ಎಂದು ಆಶ್ವಾಸನೆ ಕೊಡಬೇಕಲ್ಲ. ಮಂಡಳಿ ರಚನೆಗೆ ನಾನೇನು ಕಾಲಮಿತಿ ಹಾಕಿ ಎಂದು ಹೇಳುತ್ತಿಲ್ಲ. ಮಾನ್ಯ ಜವಳಿ ಮಂತ್ರಿಗಳು ಅತಿ ಹೆಚ್ಚಿನ ಸಮಸ್ಯೆ ಇರತಕ್ಕ ಪ್ರದೇಶದಿಂದ ಬಂದಿರತಕ್ಕವರು. ಒಂದು ಸಾರಿ ಸಮಸ್ಯೆ ಮನವರಿಕೆಯಾದ ಮೇಲೆ, ಮಾನ್ಯ ಸದಸ್ಯರು ಎತ್ತಿದ ವಿಚಾರವನ್ನು ತತ್ವಶಃ ಒಪ್ಪಿಕೊಂಡ ಮೇಲೆ ಎರಡನೆಯ ಆಲೋಚನೆ ಏನು? ಅದನ್ನು ಮಾಡಲೇಬೇಕು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರೆ ಸಾಕು.

11.40 ಪಿ.ಎಂ.

ಕೇಂದ್ರದಲ್ಲಿ ಜವಳಿ ಮಂತ್ರಿಯಾಗಿ ನಮ್ಮವರೇ ಇದ್ದಾರೆ. ಇದು ಸುಲಭವಾಗಿ ಆಗತಕ್ಕಂಥ ಕೆಲಸ.

ಅಧ್ಯಕ್ಷರು:- ದುಡ್ಡು ಬೇಕಲ್ಲ? ಟ್ಯಾಕ್ಸ್ ಹಾಕಿದರೆ ಗಲಾಟೆ ಮಾಡುತ್ತೀರಿ, ಇವೆಲ್ಲಾ ಬೇಕು ಅಂತೀರಿ, ದುಡ್ಡು ಎಲ್ಲಿಂದ ತರುವುದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಇದು ಗಲಾಟೆ ಪ್ರಶ್ನೆ ಅಲ್ಲ. ಹತ್ತಿ ಬೆಳೆದಂಥ ರೈತರ ಸಮಸ್ಯೆ ತೀವ್ರವಾಗಿದ್ದು ಅವರು ನೇಣು ಹಾಕಿಕೊಂಡು ಸಾಯತಕ್ಕಂಥ ಪರಿಸ್ಥಿತಿಗೆ ಬಂದಿದೆ.

ಅಧ್ಯಕ್ಷರು:- ಬೇಡ, ಬೇಡ. ಅಂಥಾದ್ದೆಲ್ಲಾ ಆಗುವುದು ಬೇಡ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಆಗುತ್ತಿದೆ. ಇದು ಮಾನ್ಯ ಸಚಿವರ ಗಮನಕ್ಕೂ ಬಂದಿದೆ. ರಾಯಚೂರಿನಲ್ಲಿ ನಡೆದ ಹತ್ತಿ ಬೆಳೆಗಾರರ ಸಮಾವೇಶಕ್ಕೆ ನಾನೂ ಹೋಗಿದ್ದೆ ಮಾನ್ಯ ಸಚಿವರೂ ಬಂದಿದ್ದರು.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಹತ್ತಿ ಮಂಡಳಿ ರಚಿಸುವ ಬಗ್ಗೆ ಮಾನ್ಯ ಸಚಿವರಿಗೆ ಮನದಟ್ಟಾಗಿದೆ ಎಂದು ಹೇಳಿದ್ದಾರೆ. ಸರ್ಕಾರ ಆ ದಿಸೆಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳುತ್ತದೆಂದು ಮಾನ್ಯ ಸಚಿವರು ಭರವಸೆಯನ್ನೂ ಕೂಡ ಕೊಟ್ಟಿದ್ದಾರೆ. ಈ ಮಂಡಳಿಯನ್ನು ರಚನೆ ಮಾಡುವುದಕ್ಕಾಗಿ ಮುಂದಿನ ಬಜೆಟ್‌ನಲ್ಲಿ ಹಣಕಾಸನ್ನು ಇಟ್ಟು ಮಾಡುತ್ತೇವೆಂಬ ಖಚಿತವಾದ ಭರವಸೆಯನ್ನು ಸರ್ಕಾರ ನೀಡುವುದೇ ಎನ್ನುವುದು ಒಂದು. ಈ ಮಂಡಳಿಯು ಹತ್ತಿ ಬೆಳೆಗಾರರ ಹಿತ ರಕ್ಷಣೆ ಮಾಡುವುದಕ್ಕೆ ರಚನೆಯಾಗಬೇಕೆ ಹೊರತು ಉದ್ದಿಮೆದಾರರ ಹಿತ ರಕ್ಷಣೆ ಮಾಡುವುದಕ್ಕೆ ರಚನೆಯಾಗಬಾರದು. ಮತ್ತೆ ಮಾನ್ಯ ಸಚಿವರಿಗೆ ಗೊತ್ತಿರುವ ಹಾಗೆ ಹತ್ತಿ ಬೆಲೆ ಬಹಳ ಇಳಿಮುಖವಾಗಿದೆ. ಹಾಗಾಗಿ ಹತ್ತಿ ಬೆಳೆಗಾರರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಸಿ.ಸಿ.ಐ.ನವರು ಹೆಚ್ಚು ಹತ್ತಿಯನ್ನು ಈ ಪ್ರದೇಶದಲ್ಲಿ ಖರೀದಿ ಮಾಡುವ ಹಾಗೆ ಮಾನ್ಯ ಸಚಿವರು ವ್ಯವಸ್ಥೆ ಮಾಡುತ್ತಾರೆಯೇ?

ಶ್ರೀ ಎಂ.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಹತ್ತಿ ಬೆಳೆಗಾರರ ಸಮಸ್ಯೆ ಮತ್ತು ಧಾರಣೆಯಲ್ಲಿ ಏರಿಳಿತವಾಗುವುದನ್ನು ಮನಗಂಡೆ ಇದರ ಬಗ್ಗೆ ಒಂದು ಮಂಡಳಿಯನ್ನು ರಚನೆ ಮಾಡುವುದಕ್ಕೆ ಸರ್ಕಾರ ಮನಗಂಡಿದೆಯೆಂದು ನಾನು ಈಗಾಗಲೇ ಹೇಳಿದ್ದೇನೆ. ಮುಂದಿನ ವರ್ಷದ ಬಜೆಟ್‌ನಲ್ಲಿ ಈ ಬಗ್ಗೆ ಹಣವನ್ನು ನಿಗದಿ ಮಾಡಲಾಗುತ್ತದೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಬಗ್ಗೆ ಪರಿಶೀಲಿಸಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್:- ಸಿ.ಸಿ.ಐ.ನವರು ಇಲ್ಲಿ ಹತ್ತಿಯನ್ನು ಖರೀದಿ ಮಾಡುತ್ತಿಲ್ಲ. ಇಲ್ಲಿ ಖರೀದಿ ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಸಿ.ಸಿ.ಐ.ನವರು ಇಲ್ಲಿ ಹತ್ತಿಯನ್ನು ಖರೀದಿ ಮಾಡುತ್ತಿಲ್ಲ ಎನ್ನುವ ಬಗ್ಗೆ ಗಮನ ಹರಿಸಿದ್ದೇನೆ. ಇದಕ್ಕೆ ಸಂಬಂಧಪಟ್ಟ ಕೇಂದ್ರ ಸಚಿವರಾಗಿರುವ ಮಾನ್ಯ ಜಾಲಪ್ಪನವರು ವಿದೇಶಕ್ಕೆ ಹೋಗಿರುವುದರಿಂದ ಅವರು ಬಂದ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ನಮ್ಮ ಕರ್ನಾಟಕದ ಹೆಚ್.ಡಿ. ಕೋಟೆ ಪ್ರದೇಶದಲ್ಲಿ ಬೆಳೆದಿದ್ದಂಥ ಸುಮಾರು 12 ಕೋಟಿ ರೂಪಾಯಿ ಹತ್ತಿಯನ್ನು ತಿರುಚಿಯಲ್ಲಿ ತೆಗೆದುಕೊಂಡು ಹೋಗಿ ಇಟ್ಟಿದ್ದಾರೆ. ಸುಮಾರು 6 ತಿಂಗಳ ಹಿಂದೆ ಅಲ್ಲಿಗೆ ತೆಗೆದುಕೊಂಡು ಹೋಗಿ ಅಲ್ಲಿ ಇಟ್ಟಿದ್ದರೂ ಇನ್ನೂ ದುಡ್ಡು ಬಂದಿಲ್ಲ. ಈಗ ಮಾನ್ಯ ಸಚಿವರು ಹೇಳುತ್ತಿದ್ದಾರೆ, ಇಲ್ಲಿರುವ ಗಿರಣಿಗಳಿಗೇ ಹತ್ತಿ

ಸಾಕಾಗುವುದಿಲ್ಲ ಎಂದು. ಹಾಗಾದರೆ ನಮ್ಮ ರಾಜ್ಯದಲ್ಲಿ ಬೆಳೆದ ಹತ್ತಿ ಹೊರ ರಾಜ್ಯಕ್ಕೆ ಹೋಗತಕ್ಕಂಥ ಪರಿಸ್ಥಿತಿ ಏಕೆ ಉಂಟಾಯಿತು? ನಮ್ಮ ಗಿರಣಿಗಳಿಗೇ ಇಲ್ಲಿ ಬೆಳೆಯುವಂಥ ಹತ್ತಿ ಸಾಕಾಗುವುದರಿಂದ, ಹತ್ತಿಗೆ ಕನಿಷ್ಟ ಬೆಲೆ ನಿಗದಿ ಮಾಡುವ ಆಲೋಚನೆ ಮಾಡಿದರೆ ಹತ್ತಿ ಬೆಳೆಗಾರರಿಗೂ ಅನುಕೂಲವಾಗುತ್ತದೆ. ಹತ್ತಿ ಬಟ್ಟೆಗೂ ಮತ್ತು ಹತ್ತಿ ಮಾರಾಟಕ್ಕೂ ಯಾವತ್ತೂ ಸಂಬಂಧ ಇರಬೇಕು. ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುವ ಬಗ್ಗೆ ಆಲೋಚನೆ ಮಾಡಿದ್ದರೆ ಮಾನ್ಯ ಸಚಿವರು ದಯವಿಟ್ಟು ತಿಳಿಸಬೇಕು.

ಶ್ರೀ ಎಂ.ಎಸ್. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ಇದು ಒಂದು ವಿಚಿತ್ರವಾದ ಸಮಸ್ಯೆ. ಅದಕ್ಕಾಗಿಯೇ ಈ ಬಗ್ಗೆ ಒಂದು ಮಂಡಳಿ ರಚನೆ ಮಾಡಬೇಕೆಂದು ಆಲೋಚನೆ ಮಾಡಲಾಗಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬೆಳೆದಂತ ಹತ್ತಿಯಲ್ಲಿ 30 ಭಾಗವನ್ನು ನಾವು ಉಪಯೋಗ ಮಾಡುತ್ತೇವೆ, ಕೆಲವು ಸಂದರ್ಭಗಳಲ್ಲಿ ನಮ್ಮ ಗಿರಣಿಗಳವರು ಹೊರ ರಾಜ್ಯಗಳಿಂದಲೂ ಹತ್ತಿಯನ್ನು ತರಿಸುತ್ತಾರೆ. ನಮ್ಮಲ್ಲಿನ ಹತ್ತಿ ಬೇರೆ ಕಡೆ ಹೋಗುತ್ತದೆ. ಇದಕ್ಕೆ ಹಲವಾರು ಕಾರಣ ಮತ್ತು ಸಮಸ್ಯೆಗಳಿವೆ. ನಮ್ಮ ರಾಜ್ಯದಲ್ಲಿ ಬೆಳೆದ ಹತ್ತಿಯನ್ನು ನಮ್ಮ ಗಿರಣಿಗಳು ಉಪಯೋಗ ಮಾಡದೆ ಅದನ್ನು ತಮಿಳುನಾಡಿನಲ್ಲಿ ಉಪಯೋಗ ಮಾಡುವ ಹಾಗಾಗಿದೆ. ಈ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂಬ ಉದ್ದೇಶದಿಂದಲೇ ಈ ಬಗ್ಗೆ ಒಂದು ಮಂಡಳಿ ರಚನೆ ಮಾಡಬೇಕೆಂದು ಯೋಚನೆ ಮಾಡಲಾಗಿದೆ.

ಶ್ರೀ ಎ.ಟಿ. ರಾಮಸ್ವಾಮಿ:- ಮಾನ್ಯ ಸಭಾಧ್ಯಕ್ಷರೆ, ಕಳೆದ ವರ್ಷದ ಹತ್ತಿ ಧಾರಣೆಗೆ ಹೋಲಿಸಿದರೆ ಈ ವರ್ಷ ಒಂದು ಕ್ವಿಂಟಾಲ್ ಹತ್ತಿಗೆ ಒಂದು ಸಾವಿರ ರೂಪಾಯಿ ಧಾರಣೆ ಕಡಿಮೆಯಾಗಿದೆ. ಇದರಿಂದಾಗಿ ಹತ್ತಿ ಬೆಳೆಯತಕ್ಕಂಥ ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಆದ್ದರಿಂದ, ಹತ್ತಿಗೆ ಒಂದು ಸ್ಥಿರವಾದ ಬೆಲೆಯನ್ನು ಕೊಡುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳುತ್ತದೆಯೇ?

ಶ್ರೀ ಎಂ.ಎಸ್. ಪಾಟೀಲ್:- ಈ ವಿಷಯದ ಜವಳಿಗೆ ಸಂಬಂಧಪಡದೇ ಇದ್ದರೂ ಸಹಾ ಹತ್ತಿ ಬೆಳೆಗಾರರ ಸಮಸ್ಯೆಯನ್ನು ಮನಗಂಡು ಸಿ.ಸಿ.ಐ.ನವರು ಬೆಲೆಯನ್ನು ನಿಯಂತ್ರಣ ತರುವುದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

ವಿಷಯ:- ಎನ್.ಜಿ.ಇ.ಎಫ್ ನಿಂದ ಆಸ್ತಿ ತೆರಿಗೆ ಬಾಕಿ.

21(121)

ಶ್ರೀ ಅಶ್ವತ್ಥನಾರಾಯಣ ರೆಡ್ಡಿ (ವರ್ತೂರು):- ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಎನ್.ಜಿ.ಇ.ಎಫ್ ಕಾರ್ಖಾನೆ ಸ್ಥಳೀಯ ಸಂಸ್ಥೆಗೆ ಆಸ್ತಿ ತೆರಿಗೆಯನ್ನು ಪಾವತಿ ಮಾಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು;